2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ

ಸಿ. ಸಿ. ನಂ.2415/2024

ಪಿರ್ಯಾದುದಾರರು:- ಸಂಚಾರಿ ಪೊಲೀಸರು, ಹೊಸಕೋಟೆ

ವಿರುದ್ದ

ಆರೋಪಿ:- ನರಸಿಂಹಮೂರ್ತಿ,
ಬಿನ್ ಲೇಟ್ ಮುನಿರೆಡ್ಡಿ,
ವಯಸ್ಸುಃ 50 ವರ್ಷ
ವಾಸಃ ಶ್ರೀವಿನಾಯಕ ಆಟೋ ವರ್ಕ್ಸ್,
ಮತ್ತು ಗ್ಯಾರೇಜ್ ಹತ್ತಿರ ಸಿದ್ದಗಂಗಾ,
ಬೂದಿಗೇರೆ ಚನ್ನರಾಯಪಟ್ಟಣ ಹೋಬಳಿ,
ಬೆಂಗಳೂರು ಜಿಲ್ಲೆ.

## ಆಪಾದನೆ

ಶ್ರೀಮತಿ. ಶಿಲ್ಪಶ್ರೀ ಎನ್. ಎಸ್ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿನಾಂಕ-02.02.2024 ರಂದು ಸಂಜೆ ಸುಮಾರು 5.00 ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ಸಂಚಾರ ಪೊಲೀಸ್ ಠಾಣಾ ಸರಹದ್ದು, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ತಿರುಮೇನಹಳ್ಳಿ ಕ್ರಾಸ್ ಕಡೆಗೆ ಹೋಗುವ ರಸ್ತೆಯಲ್ಲಿ, ಆರೋಪಿಯಾದ ನೀವು ಕೆ.ಎ.01.ಹೆಚ್.ವೈ.0855 ನಂಬರಿನ ರಾಯಲ್ ಎನ್ ಫೀಲ್ಡ್ ಬೈಕನ್ನು ಅತಿವೇಗ ಮತ್ತು ಅಜಾಗ್ರುಕತೆಯಿಂದ ಓಡಿಸಿಕೊಂಡು ಬಂದು ಸಾಕ್ಷಿ.02 ರವರಿಗೆ ಡಿಕ್ಕಿ ಹೊಡೆಸಿ ಅಪಘಾತ ಮಾಡಿದ ಪರಿಣಾಮ ಸಾಕ್ಷಿ.02 ರವರು ರಸ್ತೆಯ ಮೇಲೆ ಬಿದ್ದು, ತಲೆಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಮುಂದುವರೆದು, ಅಪಘಾತವುಂಟು ಮಾಡಿದ ಕೆ.ಎ.01.ಹೆಚ್.ವೈ.0855 ನಂಬರಿನ ರಾಯಲ್ ಎನ್ ಫೀಲ್ಡ್ ಬೈಕಿಗೆ ಇನ್ಸೂರೆನ್ಸ್ ಇರುವುದಿಲ್ಲ ಎಂದು ಆರೋಪಿಸಲಾಗಿದೆ.

ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.279, 338, ಮತ್ತು ಭಾರತೀಯ ಮೋಟಾರ್ ವಾಹನ ಕಾಯಿದೆ ಕಲಂ. 146, 196 ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ

ಸಿ. ಸಿ. ನಂ.2415/2024

ಪಿರ್ಯಾದುದಾರರು:- ಸಂಚಾರಿ ಪೊಲೀಸರು, ಹೊಸಕೋಟೆ

ವಿರುದ್ಧ

ಆರೋಪಿ:- ನರಸಿಂಹಮೂರ್ತಿ,
ಬಿನ್ ಲೇಟ್ ಮುನಿರೆಡ್ಡಿ,
ವಯಸ್ಸುಃ 50 ವರ್ಷ
ವಾಸಃ ಶ್ರೀವಿನಾಯಕ ಆಟೋ ವರ್ಕ್ಸ್,
ಮತ್ತು ಗ್ಯಾರೇಜ್ ಹತ್ತಿರ ಸಿದ್ದಗಂಗಾ,
ಬೂದಿಗೇರೆ ಚನ್ನರಾಯಪಟ್ಟಣ ಹೋಬಳಿ,
ಬೆಂಗಳೂರು ಜಿಲ್ಲೆ.

## ಆಪಾದನೆ

ಪ್ರಶ್ನೆ1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ: ಆರೋಪಿ-1 :

ಪ್ರಶ್ನೆ2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ: ಆರೋಪಿ-1 :

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ:17.06.2026 ರಂದು ಧೃಢೀಕರಿಸಿದ್ದೇನೆ.

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**

ಆರೋಪಿ-1